<u>ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.</u>

<u>**SC No**.131/2020</u>

**PW**. 7

**CW**. 7

**ಸಾಕ್ಷಿಯ ಹೆಸರು –ರವೀಂದ್ರ ಬಿ ಸಿ**

**ತಂದೆಯ ಹೆಸರು –ಚಿನ್ನಯ್ಯ**

**ವಯಸ್ಸು –69 ವರ್ಷಗಳು** ದಿನಾಂಕ <u>27–10–2025</u> ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ನಿವೃತ್ತ ಸಹಾಯಕ ನಿರ್ದೇಶಕರು, ಎಫ್ ಎಸ್ ಎಲ್ ಬೆಂಗಳೂರು**

**ವಾಸಸ್ಥಳ –ಮಂಗಳೂರು**

<u>**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**</u>

ನಾನು 1985 ರಿಂದ 2017 ರವರೆಗೆ ವಿವಿಧ ಹುದ್ದೆಗಳಲ್ಲಿ ಎಫ್ ಎಸ್ ಎಲ್ ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿದ್ದೇನೆ. ನಾನು ಬಿ ಎಸ್ ಸಿ ವ್ಯಾಸಾಂಗ ಮಾಡಿದ್ದು , ಸ್ಫೋಟಕ ವಸ್ತುಗಳ ವಿಧಿ ವಿಜ್ಞಾನದಲ್ಲಿ ಡಿಪ್ಲೋಮಾ ತರಬೇತಿ ಹೊಂದಿದ್ದೇನೆ. ನನ್ನ ದೀರ್ಘಾವಧಿ ಸೇವೆ ಅವಧಿಯಲ್ಲಿ 500 ಪ್ರಕರಣಗಳಲ್ಲಿ ಸ್ಫೋಟಕ ವಸ್ತುಗಳನ್ನು ಪರಿಶೀಲಿಸಿ ವರದಿ ನೀಡಿದ್ದೇನೆ.

ದಿಃ 12–04–2014 ರಂದು ಹುಣಸೂರು ಪೋಲೀಸರ ಕೋರಿಕೆಯ ಮೇರೆಗೆ ದಿಃ 09–07–2015 ಬಿಳಿಕೆರೆ ಪೊಲೀಸ್ ಠಾಣೆಗೆ ಭೇಟಿ ನೀಡಿ , ಈ ಪ್ರಕರಣದಲ್ಲಿ ಜಪ್ತಿ ಮಾಡಿದ 24 ಬಂಡಲ್ ಫ್ಯೂಸ್ ವೈರ್, ಪ್ರತಿ ಬಂಡಲ್ 250 ಮೀಟರ್ ಫ್ಯೂಸ್ ವೈರ್ ಇತ್ತು. ಅವುಗಳ ಪೈಕಿ ಎರಡು ಅಡಿ ಉದ್ದದ ಫ್ಯೂಸ್ ವೈರ್ ಅನ್ನು ಕತ್ತರಿಸಿ ತೆಗೆದು ಪರೀಕ್ಷೆ ಮಾಡಿ ನೋಡಲಾಗಿ , ಅದು ಜೀವಂತವಾಗಿ ಇದ್ದಿದ್ದು , ಅದರ ಪಕ್ಕದಲ್ಲಿ ಒಂದು ಬಿಳಿಯ ಬಟ್ಟೆಯಲ್ಲಿ ಪ್ಯಾಕ್ ಮಾಡಿದ ಕಾರ್ಡ ಬೋರ್ಡ ಬಾಕ್ಸ ಇದ್ದು , ಅದರಲ್ಲಿ 320 ಜೆಲ್ Exploser ಕಾರ್ಟೇಜ್ ಇದ್ದವು. ಅವುಗಳನ್ನು

VETRIVEL EXPLOSIVES PVT LTD ತಿರುಚಿಯಲ್ಲಿ ತಯಾರಿಸಲಾಗಿತ್ತು. ಪ್ರತಿ ಕಾರ್ಟೇಜ್ ನ ತೂಕ 125 ಗ್ರಾಂ ಇತ್ತು. ಅದರ ಉದ್ದ 200 ಮೀಲಿ ಮೀಟರ ಇದ್ದವು. ಅವುಗಳ ಪೈಕಿ ಒಂದು ಕಾರ್ಟೇಜ್ ಅನ್ನು ತೆಗೆದು ನೋಡಲಾಗಿ, ಪಿಂಕ್ ಬಣ್ಣದಿಂದ ಕೂಡಿದ್ದು, ಅಮೋನಿಯಂ ನೈಟ್ರೇಜ್  ಪಿಲ್ಸ ಗಳು ಇದ್ದವು. ಸದರಿ ವಸ್ತುಗಳನ್ನು ಪರೀಕ್ಷೆ ಮಾಡಿ, ಮುಂದಿನ ತನಿಖೆಗಾಗಿ ಒಂದು ಕಾರ್ಟೇಜ್ ಅನ್ನು ಹಾಗೂ 25 ಅಡಿ ಉದ್ದದ ಫ್ಯೂಸ್ ವೈರ್ ಅನ್ನು ಜಪ್ತಿ ಮಾಡಿ, ಎಫ್ ಎಸ್ ಎಲ್ ಗೆ ಕಳುಹಿಸಿಕೊಡಲು ತಿಳಿಸಿರುತ್ತೇನೆ.  ಸದರಿ ವಸ್ತುಗಳನ್ನು ಸ್ಥಳದಲ್ಲಿ ಪರೀಕ್ಷೆ ಮಾಡಿ ವರದಿ ನೀಡಿದ್ದೇನೆ. ಸದರಿ ಸೆಪ್ಟಿ ಫ್ಯೂಸ್ ವೈರ್ ಅನ್ನು , Detonators ಗಳನ್ನು ಸ್ಫೋಟಿಸಲು ಉಪಯೋಗಿಸುತ್ತಾರೆ. ಸದರಿ ಕಾರ್ಟೆಜಿನಲ್ಲಿ AMMONIUM NaitRED JEL ಅನ್ನು ಕಲ್ಲು ಗಣಿಗಾರಿಕೆಗೆ ಉಪಯೊಋೀಗಿಸುತ್ತಾರೆ. ಸೂಕ್ತ ರಕ್ಷಣಾತ್ಮಕ ವ್ಯವಸ್ಥೆ ಮಾಡಿಕೊಳ್ಳದೆ ಸದರಿ ವಸ್ತುಗಳನ್ನು ಸ್ಫೋಟಿಸಿದರು ಮಾನವ ಜೀವಗಳಿಗೆ ಅಪಯಕಾರಿಯಾಗುವ ಸಂಭವವಿದೆ. ಆ ಬಗ್ಗೆ ವರದಿ ನೀಡಿದ್ದೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–10 ಎಂದು ಸಾಕ್ಷಿಯ ಸಹಿಯನ್ನು ನಿಪಿ–10(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳ ಪೈಕಿ ಈಗಾಗಲೇ ನಿಪಿ–3 ರಿಂದ 6 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್ ಎನ್ ಪಿ ವಕೀಲರಿಂದಃ–**

ಈ ಪ್ರಕರಣದಲ್ಲಿ ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಪರೀಕ್ಷಿಸಿ ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುಗಳನ್ನು ಪರಿಶೀಲಸದೆ ಪೊಲೀಸರ ಅನೂಕೂಲಕ್ಕೆ ತಕ್ಕಂತೆ ವರದಿ ನೀಡಿದ್ದೇನೇ ಎಂದರೆ ಸರಿಯಲ್ಲ.

ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–3 ರಿಂದ 6 ರ ಪೋಟೋಗಳನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.